ಸಾಕ್ಷಿಯನ್ನು ದಿಃ 22.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

2 ನೇ ಎದುರುದಾರರು ಓ.ಡಿ. ಕ್ಲೇಮ್ ಮಾಡಿರುವ ಕಾರಣ ನಮಗೂ ಮತ್ತು 2 ನೇ ಎದುರುದಾರರಿಗೆ ಯಾವುದೇ ಕರಾರು ಇಲ್ಲ ಎಂದು ಪತ್ರ ಕಳುಹಿಸಿರುತ್ತೇವೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ. 31 ಎಂದು ಗುರುತಿಸಲಾಯಿತು. ಅಪಘಾತ ಸಮಯದಲ್ಲಿ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿಯು ವಿಜಯ ಪಿ ಎನ್ನುವವರು ಹೆಸರಿನಲ್ಲಿದ್ದು 2 ನೇ ಎದುರುದಾರರ ಹೆಸರಿನಲ್ಲಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಪಾಲಿಸಿ ನವೀಕರಣಗೊಳಿಸುವ ಪದ್ಧತಿ ಇದೆ ಎಂದರೆ ಸರಿ. ಪ್ರಶ್ನಿತ ವಾಹನಕ್ಕೆ ಒಂದು ವರ್ಷದ ಅವಧಿಯವರೆಗೆ ಚಾಲ್ತಿಯಲ್ಲಿತ್ತು. ಅಪಘಾತ ಸಮಯದಲ್ಲಿ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಮುಂದುವರೆದು ವಿಜಯ ಪಿ ಎನ್ನುವವರು ಹೆಸರಿನಲ್ಲಿದ್ದು 2 ನೇ ಎದುರುದಾರರ ಹೆಸರಿನಲ್ಲಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಕುಮಾರ್ ಮತ್ತು ಕೆಂಚಪ್ಪಸ್ವಾಮಿಗೆ ಇವರಿಗೆ ಅಪಘಾತ ಸಮಯದಲ್ಲಿ ಗಾಯ ಆಗಿರುವುದಿಲ್ಲ ಮತ್ತು ಯಾವುದೇ ತೊಂದರೆ ಆಗಿಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದು ಆ ಬಗ್ಗೆ ತನಿಖೆ ಮಾಡಿಸಿದ್ದೀರಾ ಎಂದರೆ ಹೌದು ಎಂದು ಉತ್ತರಿಸಿರುತ್ತಾರೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ನಾವು ಯಾವುದೇ ತನಿಖೆ ನಡೆಸದೇ ಇರುವ ಕಾರಣ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ವಾಹನದ ಪಾಲಿಸಿ ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಮಾಹಿತಿ ಇಲ್ಲ. ಪರಿಹಾರ ನೀಡುವ ಭಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅರ್ಜಿದಾರರಿಗೆ ಪರಿಹಾರ ನೀಡಲು ನೇರ ಭಾಧ್ಯಸ್ಥರು ಎಂದರೆ ಸರಿಯಲ್ಲ. ನಿಪಿ. 31 ರ ಬಗ್ಗೆ ತಕರಾರಿನಲ್ಲಾಗಲೀ ಪ್ರಮಾಣ ಪತ್ರದಲ್ಲಾಗಲೀ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಮ್ಮ ತಕರಾರಿನಲ್ಲಿ ಆ ಬಗ್ಗೆ ಹೇಳಿರುತ್ತೇವೆ

ಎಂದು ಉತ್ತರಿಸಿರುತ್ತಾರೆ. 2 ಮತ್ತು 3 ನೇ ಅರ್ಜಿದಾರರಿಗೆ ಪರಿಹಾರ ನೀಡಲು ಭಾಧ್ಯಸ್ಥರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.